# ಮಾದರಿ ಪ್ರಶ್ನೆ ಪತ್ರಿಕೆ–2017
# Model Question paper-2017

**CCE RF**
**CCE RR**

**ಸಂಕೇತ ಸಂಖ್ಯೆ: 33K**

**Code No: 33K**

## ವಿಷಯ:–ದ್ವಿತೀಯ ಭಾಷೆ–ಕನ್ನಡ
## Subject: Second language-KANNADA
## (ಹೊಸ ಪಠ್ಯಕ್ರಮ/New Syllabus)

(ಶಾಲಾ ಅಭ್ಯರ್ಥಿ + ಪುನರಾವರ್ತಿತ ಶಾಲಾ ಅಭ್ಯರ್ಥಿ / **Regular Fresh + Regular Repeater)**

ಸಮಯ: ಬೆಳಿಗ್ಗೆ 9.30 ರಿಂದ ಮದ್ಯಾಹ್ನ 12.00 ರವರೆಗೆ — **Time: 9.30 to 12.00 Noon**

ಗರಿಷ್ಠ ಅಂಕಗಳು: 80 — **Maximum marks : 80**

### ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತದೆ.
5. ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ : $8 \times 1 = 8$

1. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ?
2. ರಾಹುಲ್‌ರವರಿಗೆ 'ದ್ರಾವಿಡ್' ಎಂಬ ಹೆಸರು ಹೇಗೆ ಸೇರಿತು ?
3. ಕಾಡಿನ ಪ್ರಾಣಿಗಳು ನಾಡಿಗೆ ಬಂದದ್ದೇಕೆ ?
4. ರಾಮನ್‌ರವರು ವಾರವಾರವೂ ವ್ಯಾಸಂಗ ಗೋಷ್ಠಿಗಳನ್ನೇಕೆ ಏರ್ಪಡಿಸುತ್ತಿದ್ದರು ?
5. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?
6. ಮೈ ಹಣ್ಣಾಗಲು ಕಾರಣವೇನು ?
7. ಭರತ – ಬಾಹುಬಲಿಯರ ಸೆಣಸಾಟದ ಫಲಿತಾಂಶವೇನು ?
8. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು–ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $11 \times 2 = 22$

9. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಯಾವುದು ?
10. ರಾಹುಲ್ ದ್ರಾವಿಡರನ್ನು 'ಗೋಡೆ' ಎಂದು ಕರೆಯಲು ಕಾರಣವೇನು ?
11. ಅಜ್ಜ ಮಾಡಿದ ತಪ್ಪು ಯಾವುದು ?
12. ಬಾಹುಬಲಿಯು ಬೆಟ್ಟದ ಮೇಲೆ ಬಂದು ನಿಲ್ಲಲು ಕಾರಣಗಳಾವುವು ?
13. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯಗಳನ್ನು ಹೇಗೆ ಮಾಡಬೇಕೆನ್ನುತ್ತಾರೆ ?
14. ತೊಟ್ಟಿಲದ ಶಿಶುವ ಕಂಡರೆ ಹಸಿವು ಅಡಗುವುದು ಹೇಗೆ ?

15. ಅಜ್ಜನ ಆದರ್ಶ ಗುಣಗಳಾವುವು ?

16. ರಾಮನ್ನರು ಯಾರೊಬ್ಬರ ಶಿಫಾರಸ್ಸನ್ನು ನಂಬಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳದಿರಲು ಕಾರಣವೇನು ?

17. ಅರಿವು ಪದ್ಯದಲ್ಲಿ ಕವಿಯಿತ್ರಿಗೆ ತನ್ನ ಇರುವಿಕೆಯ ಅರಿವಾಗುವುದು ಯಾವಾಗ ಎಂದು ಹೇಳಿದ್ದಾರೆ ?

18. ಕುರ್ಚಿಯ ಬಗ್ಗೆ ಜೋಯಿಸರ ಹೆಂಡತಿಗೆ ಇರುವ ಭಾವನಾತ್ಮಕ ಸಂಬಂಧ ಎಂತಹುದು ?

19. ಸಾವಿತ್ರಿ ತೀರಾ ಮುಗ್ಧೆ ಹೇಗೆ ?

20. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : $1 \times 3 = 3$

ಯುಗದ ಆದಿಯು ಬಂತು ____________________

____________________

____________________

____________________ ನವವಧುವೆ ಆದಳಿಂತು.

*ಅಥವಾ*

ಮೈಕೊಡವಿ ಎದ್ದ ____________________

____________________

____________________

____________________ ವಾಲಗವೇ ನಡೆದಂತಿದೆ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ : $2 \times 3 = 6$

21. "ಸಹ್ಯ ಪರ್ವತವು ಈಗ ಅಸಹ್ಯ ಪರ್ವತವಾಗಿದೆ".

22. "ನೀರ ಕಂಡಲ್ಲಿ ಮುಳುಗುವರಯ್ಯ."

ಈ ಕೆಳಗಿನ ಸಾಹಿತಿಗಳ ಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : $2 \times 3 = 6$

23. ಕುವೆಂಪು

24. ಕುಮಾರವ್ಯಾಸ

ಈ ಕೆಳಗಿನ ಪ್ರಶ್ನೆಗಳಿಗೆ **ಎಂಟು–ಹತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

25. ಸಾಧನೆಗೆ ಅಂಗಹೀನತೆಯು ಅಡ್ಡಿಯಾಗದು ಎಂಬುದು ಪುಟ್ಟರಾಜರ ವಿಷಯದಲ್ಲಿ ನಿಜವಾಗಿದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

*ಅಥವಾ*

ಪುಟ್ಟರಾಜರೆಂದರೆ ಕಣ್ಣಿಗೆ ಕಟ್ಟುವ ಚಿತ್ರ ಯಾವುದು ? ನಾಟಕ ಕ್ಷೇತ್ರಕ್ಕೆ ಇವರ ಕೊಡುಗೆ ಏನೆಂಬುದನ್ನು ವಿವರಿಸಿ.

26. ಬದುಕಿಗೊಂದು ಗುರಿ ಇರಲೇಬೇಕು ಎಂಬುದನ್ನು ಗುರಿ ಪದ್ಯದಲ್ಲಿ ಗೋಪಾಲಕೃಷ್ಣ ಅಡಿಗರು ವ್ಯಕ್ತಪಡಿಸಿರುವ ರೀತಿಯನ್ನು ವಿವರಿಸಿ.

*ಅಥವಾ*

'ಗುರಿ' ಪದ್ಯದ ಸಾರಾಂಶವನ್ನು ಕವಿಯ ಆಶಯಗಳೊಂದಿಗೆ ವಿವರಿಸಿ.

## ವಿಭಾಗ – 'ಬಿ'

## (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ,
ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ : $12 \times 1 = 12$

27. 'ಪ್ರಯೋಗಾಲಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

(ಸಿ) ಆಗಮ ಸಂಧಿ (ಡಿ) ವೃದ್ಧಿ ಸಂಧಿ

28. ಕ್ರಿಯಾ ಸಮಾಸಕ್ಕೆ ಉದಾಹರಣೆ ಇದು

(ಎ) ಹೆಬ್ಬಂಡೆ (ಬಿ) ಅರಮನೆ

(ಸಿ) ಮರವೇರು (ಡಿ) ನವರಸ

29. ಷಟ್ಪದಿಯಲ್ಲಿರುವ ಸಾಲುಗಳ ಸಂಖ್ಯೆ

(ಎ) ಮೂರು (ಬಿ) ಎಂಟು

(ಸಿ) ನಾಲ್ಕು (ಡಿ) ಆರು

30. ಉಪಮಾನ ಉಪಮೇಯಗಳಿಗೆ ಭೇದವಿಲ್ಲದಂತೆ ಹೇಳುವ ಅಲಂಕಾರವನ್ನು ಹೀಗೆನ್ನುತ್ತಾರೆ.

(ಎ) ರೂಪಕಾಲಂಕಾರ (ಬಿ) ಉತ್ಪ್ರೇಕ್ಷಾಲಂಕಾರ

(ಸಿ) ಶಬ್ದಾಲಂಕಾರ (ಡಿ) ಉಪಮಾಲಂಕಾರ

31. ಕ್ರಿಯಾಪದದ ಮೂಲರೂಪವನ್ನು ಹೀಗೆ ಕರೆಯುತ್ತಾರೆ ?

(ಎ) ನಾಮಪ್ರಕೃತಿ (ಬಿ) ಧಾತು

(ಸಿ) ಪ್ರತ್ಯಯ (ಡಿ) ಉಪಸರ್ಗ

32. 'ನಿಲ್ಲುನಿಲ್ಲು' ಎಂಬುದು ಇದಕ್ಕೆ ಉದಾಹರಣೆ

(ಎ) ಜೋಡಿ ಪದ (ಬಿ) ಅನುಕರಣಾವ್ಯಯ

(ಸಿ) ಸರ್ವನಾಮ (ಡಿ) ದ್ವಿರುಕ್ತಿ

33. 'ಹೋಗ್ಯಾವೋ' ಪದದ ಗ್ರಾಂಥಿಕ ರೂಪ

(ಎ) ಹೋಗಿವೆಯೋ (ಬಿ) ಹೋದವೆ

(ಸಿ) ಹೋಗಿವೊವೇ (ಡಿ) ಹೋಗವೆವೋ

34. 'ಶರ್ಕರಾ' ಪದದ ತದ್ಭವ ರೂಪ

(ಎ) ಶರ್ಕರೆ (ಬಿ) ಸಕ್ಕರೆ

(ಸಿ) ಸಕ್ಕದ (ಡಿ) ಶಕ್ಕಾರ

35. 'ರಾಮನನ್ನು' ಈ ಪದದ ವಿಭಕ್ತಿ

(ಎ) ಪ್ರಥಮಾ (ಬಿ) ಪಂಚಮೀ

(ಸಿ) ಷಷ್ಠಿ (ಡಿ) ದ್ವಿತೀಯಾ

36. 'ಅತಿವೃಷ್ಟಿ' ಪದದ ವಿರುದ್ಧಾರ್ಥಕ ಪದ

(ಎ) ಅನಾವೃಷ್ಟಿ (ಬಿ) ಸುವೃಷ್ಟಿ

(ಸಿ) ಅಕಾಲವೃಷ್ಟಿ (ಡಿ) ಸಂವೃಷ್ಟಿ

37. ಅನ್ವೇಷಣೆ ಪದದ ಅರ್ಥ

(ಎ) ಹುಡುಕುವುದು (ಬಿ) ತಡೆಯುವುದು

(ಸಿ) ತೆಗೆಯುವುದು (ಡಿ) ನೋಡುವುದು

38. ಗಿಡಗಂಟೆ ಎಂಬುದು ಇದಕ್ಕೆ ಉದಾಹರಣೆ

(ಎ) ದ್ವಿರುಕ್ತಿ (ಬಿ) ಜೋಡುನುಡಿ

(ಸಿ) ಗಾದೆ (ಡಿ) ಅನುಕರಣಾವ್ಯಯ

## ವಿಭಾಗ – ಸಿ
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : $4 \times 1 = 4$

ಕಂಸಾಳೆ ಕಲೆಗಾಗಿ ಜೀವಮಾನವಿಡೀ ದುಡಿದ ಮಹದೇವಯ್ಯ ಅವರನ್ನು ಕಂಸಾಳೆ ಮಹದೇವಯ್ಯ ಎಂದೇ ಜನ ಕರೆಯುತ್ತಿದ್ದರು. ಕಂಸಾಳೆ ಎಂದರೆ ಮಹದೇವಯ್ಯ, ಮಹದೇವಯ್ಯ ಎಂದರೆ ಕಂಸಾಳೆ ಎಂದು ಗುರುತಿಸುವ ಮಟ್ಟಿಗೆ ಕಲೆ ಮತ್ತು ಅವರ ಬದುಕು ಬೆರೆತು ಹೋಗಿತ್ತು. ಮಹದೇವಯ್ಯನವರು ಹುಟ್ಟಿದ್ದು ಮೈಸೂರು ಹೊಸಬಂಡಿ ಕೇರಿಯಲ್ಲಿ, ಇವರ ಕುಟುಂಬದವರು ಮೂಲತಃ ಮೈಸೂರು ತಾಲ್ಲೂಕಿನ ವರಕೋಡು ಹೋಬಳಿ ಬಡಗಲ ಹುಂಡಿಯವರು. ಆದರೆ ಮಹದೇವಯ್ಯರವರ ತಂದೆ ನಂಜಯ್ಯನವರ ಕಾಲಕ್ಕೆ ಅವರು ಹುಟ್ಟಿದೂರು ಬಿಟ್ಟು ಮೈಸೂರು ಪಟ್ಟಣ ಸೇರಿದ್ದರು.

ಜನಪದ ಗಾಯಕರು ಬಳಸುವ ಕಂಚಿನ ತಾಳಗಳಿಗೆ 'ಕಂಸಾಳೆ' ಎನ್ನುತ್ತಾರೆ. ಸಾಧಾರಣ ತಾಳಗಳಿಗಿಂತ ಕಂಸಾಳೆ ಗಾತ್ರದಲ್ಲಿ ದೊಡ್ಡದು; ಆಕೃತಿಯಲ್ಲಿ ಭಿನ್ನವಾದುದು. ಮೈಸೂರು ಜಿಲ್ಲೆ

ಮತ್ತು ಸುತ್ತಮುತ್ತಲ ಭಾಗದ ಜನರು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಹದೇಶ್ವರನ ಕಾವ್ಯ ಹಾಡುತ್ತ ಕಂಸಾಳೆ ತಟ್ಟುತ್ತ ಬೆಟ್ಟಕ್ಕೆ ಹೋಗುವುದು ವಾಡಿಕೆ. ಅದೊಂದು ರೀತಿ ದೇವರ ಸೇವೆ, ಇದಲ್ಲದೆ ವಿಶೇಷ ಸಂದರ್ಭ ಆಚರಣೆಗಳಲ್ಲಿಯೂ ಹಾಡಲು ಮತ್ತು ಕುಣಿಯಲು ಕಂಸಾಳೆ ಬಳಸುತ್ತಾರೆ.

*ಪ್ರಶ್ನೆಗಳು :*

39. ಕಂಸಾಳೆ ಎಂದರೇನು ?

40. ಮಹದೇವಯ್ಯನವರು ಎಲ್ಲಿ ಜನಿಸಿದರು ?

41. ಮೈಸೂರು ಜಿಲ್ಲೆ ಮತ್ತು ಸುತ್ತಮುತ್ತಲಿನ ಜನರು ದೀಪಾವಳಿಯ ಸಮಯದಲ್ಲಿ ಏನು ಮಾಡುವುದು ವಾಡಿಕೆಯಾಗಿದೆ ?

42. ಮಹದೇವಯ್ಯನವರನ್ನು ಕಂಸಾಳೆ ಮಹದೇವಯ್ಯ ಎಂದು ಜನರು ಏಕೆ ಕರೆಯುತ್ತಿದ್ದರು ?

43. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : $1 \times 3 = 3$

* ಆಳಾಗಬಲ್ಲವನು ಅರಸಾಗಬಲ್ಲ
* ಬೆಳೆಯುವ ಪೈರು ಮೊಳಕೆಯಲ್ಲಿ
* ತಾ ಕಳ್ಳ – ಪರರ ನಂಬ

44. ನಿಮ್ಮನ್ನು ಬೆಂಗಳೂರಿನ ರಾಜಾಜಿನಗರ ಸರ್ಕಾರಿ ಪ್ರೌಢಶಾಲೆಯ ಭೂಮಿಕಾ ಎಂದು ಭಾವಿಸಿಕೊಂಡು ನಿಮ್ಮ ತಂದೆಯೊಂದಿಗೆ ಪ್ರವಾಸಕ್ಕೆ ಹೋಗುತ್ತಿರುವ ಕಾರಣ ತಿಳಿಸಿ ರಜಾ ಕೋರಿ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಮನವಿ ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಮೈಸೂರಿನ ವಿಜಯನಗರದ ಭರತ್ ಎಂದು ಭಾವಿಸಕೊಂಡು ಹಾಸನದ ನಿವಾಸಿಯಾದ ತಂದೆಗೆ ಶಾಲೆಯ ವಾರ್ಷಿಕೋತ್ಸವ ಸಮಾರಂಭಕ್ಕೆ ಆಹ್ವಾನಿಸಿ ಒಂದು ಪತ್ರ ಬರೆಯಿರಿ.

45. ಈ ಕೆಳಗಿನ ಯಾವುದಾದರೂ ***ಒಂದು*** ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : $1 \times 4 = 4$

* ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ
* ಪರಿಸರ ಮಾಲಿನ್ಯದಿಂದುಂಟಾಗುತ್ತಿರುವ ಅನಾಹುತಗಳು
* ದೇಶದ ಪ್ರಗತಿಯಲ್ಲಿ ಯುವಶಕ್ತಿಯ ಪಾತ್ರ